# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ : 8** **ಮಾಹೆ : ಡಿಸೆಂಬರ್** **ವಿಷಯ : ದ್ವಿತೀಯ ಭಾಷೆ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **01** | **ಬ್ಲಡ್ ಗ್ರೂಪ್**<br><br>ಮೊದಲನೇ ವಾರ | * ಸಣ್ಣ ಕಥೆಗಳ ಸ್ವರೂಪವನ್ನು ಪರಿಚಯಿಸುವುದು | * ಸಣ್ಣ ಕಥೆಗಳ ಸ್ವರೂಪ ಮತ್ತು ಲಕ್ಷಣಗಳನ್ನು ಚರ್ಚಾವಿಧಾನದ ಮೂಲಕ ಚರ್ಚಿಸಿ ಅರ್ಥೈಸಿಕೊಳ್ಳುವುದು. | |
| | | * * ಆಲಿಸುವಿಕೆಯ ಕೌಶಲ ಬೆಳೆಸುತ್ತ ವಿಜಯಮಾಲ ರಂಗನಾಥ್ ರವರನ್ನು ಪರಿಚಯಿಸುವುದು. | * ವಿಜಯಮಾಲ ರಂಗನಾಥ್ ರವರ ಕಾಲ,ಸ್ಥಳ,ಕೃತಿಗಳು ಮತ್ತು ಪ್ರಶಸ್ತಿಗಳನ್ನು ವಿಡಿಯೋ ಮತ್ತು ಚಿತ್ರ ಪಟ ತೋರಿಸುವ ಮೂಲಕ ಲೇಖಕರನ್ನು ಪರಿಚಯಿಸುವುದು.<br>* ಲೇಖಕರ ಪರಿಚಯದ ಆಡಿಯೋ ಕೇಳಿಸುವುದು | * ಸರಳ ವಾಕ್ಯಗಳ ಮೂಲಕ ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯುವುದು . |
| | | * ಗದ್ಯ ಭಾಗದಲ್ಲಿ ಬಂದಿರುವ ಹೊಸ ಪದಗಳನ್ನು ಪರಿಚಯಿಸುತ್ತ ಕಠಿಣಪದಗಳನ್ನು ಅರ್ಥೈಸುವುದು ಮತ್ತು ಆಯ್ದ ಪದಗಳಿಗೆ ಸ್ವಂತವಾಕ್ಯ ಮಾಡಿಸುವುದು. | * ಶಿಕ್ಷಕರು ಗದ್ಯಭಾಗದಲ್ಲಿ ಬಂದಿರುವ ಕಠಿಣ ಪದಗಳಿಗೆ ಅರ್ಥವನ್ನು ನಿಘಂಟಿನ ಸಹಾಯದಿಂದ ಹುಡುಕಿ ಅರ್ಥವನ್ನು ಅರ್ಥೈಸಿಕೊಂಡು ಮತ್ತು ಆಯ್ದ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸುವಂತೆ ತಿಳಿಸುವುದು. | *ಆಯ್ದ ಕಠಿಣ ಪದಗಳ ಅರ್ಥ ಬರೆಸುವುದು. |
| | | * ಓದುವಿಕೆ ಮತ್ತು ಆಲಿಸುವಿಕೆ ಕೌಶಲ ಬೆಳೆಸುವುದು | * ಶಿಕ್ಷಕರು ಗದ್ಯಭಾಗವನ್ನು ಸ್ವರಭಾರಯುಕ್ತವಾಗಿ,ಅರ್ಥಪೂರ್ಣವಾಗಿ ಓದುವರು ಮತ್ತು ವಿದ್ಯಾರ್ಥಿಗಳಿಗೂ ಓದುವಂತೆ ತಿಳಿಸುವರು. ಜೊತೆಗೆ ಆಯ್ದ ಪದಗಳಿಗೆ ವಿಭಕ್ತಿಯನ್ನು ಬರೆಯುವ ರೀತಿಯನ್ನು ವಿವರಿಸುವುದು. | * ಗದ್ಯಭಾಗವನ್ನು ತಪ್ಪಿಲ್ಲದಂತೆ ಓದುವುದು. |

| | | | | |
|---|---|---|---|---|
| **02** | ಎರಡನೇ ವಾರ | * ಪಠ್ಯವನ್ನು ಆಲಿಸಿ ಮತ್ತು ಓದಿ ಸಾರಾಂಶವನ್ನು ತಮ್ಮದೇ ಮಾತುಗಳಲ್ಲಿ ವಿವರಿಸುವುದು.<br><br>* ಕಥೆ ಹೇಳುವ ಹವ್ಯಾಸ ಬೆಳೆಸುವುದು<br><br>* ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಗಳ ನಡುವಣ ವ್ಯತ್ಯಾಸ ಗುರುತಿಸುವ ಸಾಮರ್ಥ್ಯ ಬೆಳೆಸುವುದು.<br><br>* ವ್ಯಾಕರಣಾಂಶಗಳ ಪರಿಚಯ | * ಗದ್ಯ ಭಾಗದಲ್ಲಿ ಬಂದಿರುವ ವಿವಿಧ ಪಾತ್ರಗಳನ್ನು ನಾಟಕಾಭಿನಯದ ಮೂಲಕ ಗದ್ಯದ ಸಾರಾಂಶವನ್ನು ಅರ್ಥೈಸುವುದು .<br><br>* ಐತಿಹಾಸಿಕ, ಸಾಮಾಜಿಕ, ಪೌರಾಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಕಥೆ ಹೇಳಿಸುವುದು.<br><br>* ವಿದ್ಯಾರ್ಥಿಗಳಿಂದ ಗದ್ಯಭಾಗವನ್ನು ಓದಿಸುತ್ತ ಗದ್ಯದಲ್ಲಿ ಬಂದಿರುವ ಗ್ರಾಮೀಣ ಭಾಷೆಯ ಸ್ವಾರಸ್ಯವನ್ನು ಅರ್ಥೈಸುವುದು.<br><br>* ತತ್ಸಮ ಮತ್ತು ತದ್ಭವಗಳ ವ್ಯತ್ಯಾಸವನ್ನು ಉದಾಹರಣೆಗಳ ಸಹಿತ ಗುರುತಿಸುವುದು ಮತ್ತು ಬರೆಯುವುದು. | * ಅಭ್ಯಾಸ ಹಾಳೆ – 01<br><br>* ಗದ್ಯಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು.<br>* ಮಾನವೀಯ ಮೌಲ್ಯಗಳಿಗೆ ಹೆಸರುವಾಸಿಯಾದ ವ್ಯಕ್ತಿಗಳನ್ನು ಪಟ್ಟಿ ಮಾಡಿಸುವುದು.<br><br>* ಆಯ್ದ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯುವುದು.<br><br>ಆಯ್ದ ತತ್ಸಮ ಪದಗಳಿಗೆ ತದ್ಭವ ರೂಪ ಬರೆಸುವುದು.<br><br>ಅಭ್ಯಾಸ ಹಾಳೆ – 02 |

## ಪರ್ಯಾಯ ಶೈಕ್ಷಣಿಕಯೋಜನೆ 2021–22

**ತರಗತಿ : 8**     **ಮಾಹೆ : ಡಿಸೆಂಬರ್**     **ವಿಷಯ : ದ್ವಿತೀಯ ಭಾಷೆ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| **03** | *_ಮೂರನೆ ವಾರ<br><br>* ತೂಗಿ ತೂಗಿ ಮರಗಳೇ | * ತಮ್ಮ ಸುತ್ತ ಮುತ್ತ ಪರಿಸರದಲ್ಲಿರುವ ವಿವಿಧ ಜಾತಿಯ ಸಸ್ಯ ವರ್ಗವನ್ನು ಗುರುತಿಸುವ ಸಾಮರ್ಥ್ಯ ಬೆಳೆಸುವುದು.<br><br>* ಸರಳ ವಾಕ್ಯಗಳ ಮೂಲಕ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ಅವರನ್ನು ಪರಿಚಯಿಸುವುದು.<br><br>* ಸರಳ ಭಾಷಾಂಶಗಳನ್ನು ತಿಳಿಸುವುದು.<br><br>* ಓದುವಿಕೆ ಮತ್ತು ಆಲಿಸುವಿಕೆ ಕೌಶಲ ಬೆಳೆಸುವುದು.<br><br>* ಪ್ರಕೃತಿಯಲ್ಲಿರುವ ಗಿಡ ಮರಗಳ ಕೊಡುಗೆಯನ್ನು ಗುರುತಿಸಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಪಡೆಯುವರು | * ಪರಿಸರದಲ್ಲಿರುವ ಗಿಡ ಮರಗಳನ್ನು ಪಟ್ಟಿ ಮಾಡಿ ಅವುಗಳ ಉಪಯೋಗಗಳನ್ನು ತಿಳಿಯುವುದು.<br><br>* ಕವಿ ಪರಿಚಯದ ಆಡಿಯೋವನ್ನು ಕೇಳಿಸುವುದು ನಂತರ ಆಲಿಸಿದ ಮುಖ್ಯಾಂಶಗಳನ್ನು ಆಧರಿಸಿ ವಾಕ್ಯ ರೂಪದಲ್ಲಿ ಕಾಲ, ಸ್ಥಳ, ಕೃತಿ ಪ್ರಶಸ್ತಿಗಳನ್ನು ಬರೆಯಲು ತಿಳಿಸುವುದು.<br><br>* ಪದ್ಯಭಾಗದಲ್ಲಿ ಬಂದಿರುವ ಹೊಸಪದಗಳನ್ನು ನಿಘಂಟಿನ ಸಹಾಯದಿಂದ ಅರ್ಥೈಸಿ, ಸ್ವಂತ ವಾಕ್ಯ ಮಾಡಿಸುವುದು.<br><br>* ಪದ್ಯ ಭಾಗವನ್ನು ಸ್ವರ ಭಾರಯುಕ್ತವಾಗಿ, ಅರ್ಥಬದ್ಧವಾಗಿ ಓದುವರು ಮತ್ತು ವಿದ್ಯಾರ್ಥಿಗಳಿಂದಲೂ ತಪ್ಪಿಲ್ಲದಂತೆ ಓದಿಸುವುದು.<br><br>* ಶಿಕ್ಷಕರು ಮರಗಳ ಬಗ್ಗೆ ವಿವರಿಸುತ್ತ ಅವುಗಳ ಕೊಡುಗೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿ ವಿದ್ಯಾರ್ಥಿಗಳಿಂದ ಪದ್ಯದ ಸಾರಾಂಶವನ್ನು ತಮ್ಮ ಮಾತುಗಳಲ್ಲಿ ವಿವರಿಸುವುದು. | * ಔಷಧಿ ಸಸ್ಯಗಳನ್ನು ಪಟ್ಟಿ ಮಾಡುವುದು.<br><br>* ಎನ್.ಎಸ್. ಲಕ್ಷ್ಮೀನಾರಾಯಣ ಭಟ್ ರವರ ಕೃತಿಗಳನ್ನು ಪಟ್ಟಿ ಮಾಡಿ<br><br>* ಆಯ್ದ ಪದಗಳಿಂದ ಸ್ವಂತವಾಕ್ಯ ಮಾಡಿಸುವುದು.<br><br>* ಅಭ್ಯಾಸ ಹಾಳೆ – 03<br><br>* ಪದ್ಯಭಾಗಕ್ಕೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು |

| | | | | |
|---|---|---|---|---|
| | ನಾಲ್ಕನೇ ವಾರ<br>* ಮಳೆ ಬರಲಿ | ಪ್ರಕೃತಿಯಲ್ಲಿ ಉಂಟಾಗುವ ವಿವಿಧ ವೈಪರಿತ್ಯಗಳ ಬಗ್ಗೆ ಅರಿಯುವುದು.<br><br>* ಸವಿತಾ ನಾಗಭೂಷಣ್ ರವರ ಪರಿಚಯ<br><br>* ಸರಳ ವಾಕ್ಯಗಳ ರಚನಾ ಸಾಮರ್ಥ್ಯ ಬೆಳೆಸುವುದು .<br><br>* ವ್ಯಾಕರಣಾಂಶಗಳನ್ನು ಉದಾಹರಣೆಗಳ ಮೂಲಕ ವಿವರಿಸುವುದು. | ಪ್ರಕೃತಿಯಲ್ಲಿ ಋತುಮಾನಗಳಿಗೆ ತಕ್ಕಂತೆ ಉಂಟಾಗುವ ಬದಲಾವಣೆಗಳನ್ನು ವಿವರಿಸಿ ಹೇಳುವುದು<br>ಉದಾ : ಮಳೆ, ಗಾಳಿ, ಭೂಕಂಪನ, ಅತಿವೃಷ್ಠಿ, ಅನಾವೃಷ್ಠಿ ಮುಂತಾದವು<br><br>* ಕೊಟ್ಟಿರುವ ಸುಳಿವು ಪದಗಳನ್ನು ಆಧರಿಸಿ ಕವಿ ಪರಿಚಯವನ್ನು ಹೇಳಿಸಿ, ಬರೆಸುವುದು<br><br>* ಮಳೆ ಬಂದ ಸಂದರ್ಭದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳ ಬಗ್ಗೆ ಶಿಕ್ಷಕರು ಪರಿಚಯಿಸುವರು ಮತ್ತು ವಿದ್ಯಾರ್ಥಿಗಳಿಂದ ಸರಳ ವಾಕ್ಯಗಳನ್ನು ಮಾಡಿಸುವರು<br><br>* ದ್ವಿರುಕ್ತಿ–ಜೋಡುನುಡಿ ಅನುಕರಣಾವ್ಯಯಗಳನ್ನು ನಿದರ್ಶನಗಳ ಮೂಲಕ ವಿವರಿಸುವುದು ಮತ್ತು ವಿದ್ಯಾರ್ಥಿಗಳಿಂದ ಉದಾಹರಣೆಗಳನ್ನು ಮೌಖಿಕವಾಗಿ ಹೇಳಿಸುವುದು ಮತ್ತು ಬರೆಸುವುದು. | * ಆಯ್ದ ವಿಷಯಗಳಿಗೆ ಟಿಪ್ಪಣಿ ಬರೆಸುವುದು<br><br>ಆಯ್ದ ಪ್ರಶ್ನೆಗಳಿಗೆ ಉತ್ತರ ಬರೆಯುವುದು,<br><br>* ದ್ವಿರುಕ್ತಿ–ಜೋಡುನುಡಿ ಮತ್ತು ಅನುಕಣಾವ್ಯಗಳ ಉದಾಹರಣೆಪಟ್ಟಿ ಮಾಡಿಸುವುದು<br><br>* ಅಭ್ಯಾಸ ಹಾಳೆ – 04 |

## ಅಭ್ಯಾಸ ಹಾಳೆ – 1

## ಬ್ಲಡ್ ಗ್ರೂಪ್

**I. ಕೆಳಗಿನ ಪ್ರಶ್ನೆಗಳಿ ಉತ್ತರಿಸಿ :**

1. ಶ್ರೀನಿವಾಸ ರಾಘವಾಚಾರ್ಯರ ಮನೆಯಲ್ಲಿದ್ದ ಕೆಲಸಗಾರನ ಹೆಸರೇನು ?

______________________________________________________________________

2. ಆಂಡಾಳಮ್ಮನವರು ಆಸ್ಪತ್ರೆಗೆ ಸೇರಲು ಕಾರಣವೇನು ?

______________________________________________________________________

3. ಶ್ರೀನಿವಾಸ ರಾಘವಾಚಾರ್ಯರು ಸಿದ್ಲಿಂಗುವಿಗೆ ಹೇಗೆ ಕೃತಜ್ಞತೆ ಅರ್ಪಿಸಿದರು ?

______________________________________________________________________

4. ವಿಜಯಮಾಲ ರಂಗನಾಥ್ ರವರ ಕೃತಿಗಳನ್ನು ಹೆಸರಿಸಿ ?

______________________________________________________________________

5. ಸಿದ್ಲಿಂಗು ರಕ್ತ ನೀಡಲು ನಿರಾಕರಿಸಿದ್ದು ಏಕೆ ?

______________________________________________________________________

______________________________________________________________________

______________________________________________________________________

6. ಡಾಕ್ಟರ್ ಸತ್ಯವನ್ನು ಹೇಳಿದ ಸಂದರ್ಭವನ್ನು ವಿವರಿಸಿ.

______________________________________________________________________

______________________________________________________________________

______________________________________________________________________

## ಅಭ್ಯಾಸ ಹಾಳೆ – 2

**I. ಈ ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ :**

| | |
|---|---|
| ಮಾಡೊವ್ರು | |
| ಆದ | |
| ಇರ್ಲಿಲ್ಲ | |
| ತರ್ಬೇಕು | |
| ಹೇಳ್ತಾರೆ | |
| ಅಮ್ಮಾವ್ರೇ | |

**II. ಈ ಕೆಳಗಿನ ತತ್ಸಮ ಪದಗಳಿಗೆ ತದ್ಭವ ಪದಗಳನ್ನು ಹೊಂದಿಸಿ ಬರೆಯಿರಿ :**

1. ವಸತಿ – ಜೋಗಿ
2. ಶರ್ಕರ – ರಕುತ
3. ತ್ರಿಪದಿ – ಕಜ್ಜ
4. ಕಾರ್ಯ – ತ್ರಿವದಿ
5. ರಕ್ತ – ಸಕ್ಕರೆ
6. ಯೋಗಿ – ಬಸದಿ

**III. ಈ ಕೆಳಗಿನ ಅನ್ಯದೇಶೀಯ ಪದಗಳಿಗೆ ಕನ್ನಡ ಪದಗಳನ್ನು ಬರೆಯಿರಿ**

1. ಬ್ಲಡ್ : ____________________
2. ನರ್ಸ್ : ____________________
3. ಡಾಕ್ಟರ್ : ____________________
4. ಆಸ್ಪತ್ರೆ : ____________________
5. ಆಪರೇಷನ್ : ____________________
6. ಫೋನ್ : ____________________

## ಅಭ್ಯಾಸ ಹಾಳೆ – 3

## ತೂಗಿ ತೂಗಿ ಮರಗಳೇ

**I. ಚಿತ್ರ ಪಟ ಗುರುತಿಸಿ ಬರೆಯಿರಿ :**

 ______________________

 ______________________

 ______________________

 ______________________

 ______________________

 ______________________

**II. ಬಿಟ್ಟ ಸ್ಥಳ ತುಂಬಿರಿ :**

1. ಲಕ್ಷ್ಮೀನಾರಾಯಣ ಭಟ್ ರವರು ________________ ರಲ್ಲಿ ಜನಿಸಿದರು.
2. ಮರಗಳಿಗೆ __________________ ಸಮಾನ ಮನಸ್ಸಿದೆ
3. ಮರವನ್ನು __________________ ಎಂದು ಕರೆಯುವರು.
4. ಮರಗಳು ____________________ ಒಡಲು.

**III. ಕೆಳಗಿನ ಪ್ರಶ್ನೆಗಳಿ ಉತ್ತರಿಸಿ :**

1. ಮರಗಳು ಯಾವ ಮೌಲ್ಯವನ್ನು ಸಂಕೇತಿಸುತ್ತವೆ ?

______________________________________________

2. ತೂಗಿ ತೂಗಿ ಮರಗಳೇ ಪದ್ಯದ ಆಕರ ಕೃತಿ ಯಾವುದು ?

______________________________________________

3. ಕವಿ ಮರಗಳನ್ನು ಏನೆಂದು ಬಣ್ಣಿಸಿದ್ದಾರೆ ?

______________________________________________

4. ಮರಗಳು ಏನನ್ನು ಸೀಳಿ ಮೇಲೆ ಬರುತ್ತವೆ ?

______________________________________________

5. ಮರಗಳ ಉಪಯೋಗಗಳನ್ನು ಬರೆಯಿರಿ :

______________________________________________

______________________________________________

______________________________________________

______________________________________________

______________________________________________

______________________________________________

**IV. ಮೊದಲೆರಡು ಪದಗಳಿಗೆ ಸಂಬಂದಿಸಿಧಸಿದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ :**

1. ಇಳೆ: ಭೂಮಿ :: ಗಗನ : ____________________

2. ಧರ್ಮ : ಅಧರ್ಮ :: ಪ್ರೀತಿ : ________________

3. ಯುಗ : ಜುಗ :: ವರ್ಣ : ________________

**V ಈ ಕೆಳಗಿನ ಪದಗಳಿಗೆ ಸ್ವಂತ ವಾಕ್ಯ ಬರೆಯಿರಿ :**

1. ಔದಾರ್ಯ ______________________________________

2. ಅಹಿಂಸೆ : ______________________________________

3. ಕರುಣೆ : ______________________________________

4. ನಿರ್ಮಾತೃ : ______________________________________

## ಅಭ್ಯಾಸ ಹಾಳೆ – 4

**I. ಕೆಳಗಿನ ಕವಿಯ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ :**

1. ಲಕ್ಷ್ಮೀನಾರಾಯಣ ಭಟ್

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

1. ಸಕಲ ಜೀವರಾಶಿಗಳಿಗೆ ಜೀವಾಧಾರ ಯಾವುದು ?

______________________________________________

2. ರೈತರಿಗೆ ಸುಖ ನಿದ್ದೆಗಳು ಯಾವಾಗ ಸಿಗುವುದಿಲ್ಲ ?

______________________________________________

3. ಮಳೆ ಬಂದಾಗ ಬೆಟ್ಟ ಬಯಲುಗಳು ಏನಾಗುತ್ತವೆ ?

______________________________________________

4. ಮಳೆಬರಲಿ ಪದ್ಯವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

______________________________________________

5. ಮಳೆ ಬಂದಾಗ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ .

______________________________________________

______________________________________________

______________________________________________

______________________________________________

______________________________________________

**II. ಕೆಳಗಿನ ಪದಗಳ ಅರ್ಥ ಬರೆಯಿರಿ :**

1. ಮುಗಿಲು : ____________________________

2. ಮಳೆ : ________________________________

3. ಛಾವಣಿ : _____________________________

4. ಕಂಬಳಿ : ______________________________

5. ನಮ್ರತೆ : ______________________________

**III. ಕೆಳಗಿನ ಪದಗಳನ್ನು ದ್ವಿರುಕ್ತಿ, ಅನುಕರಣಾವ್ಯಯ ಮತ್ತು ಜೋಡುನುಡಿಗಳಾಗಿ ವಿಂಗಡಿಸಿ :**

ಧೋ, ಹಳ್ಳ ಕೊಳ್ಳ, ನೆಲ ಮುಗಿಲು, ಬೆಟ್ಟ ಬಯಲು, ಬೇಗಬೇಗ, ಕಷ್ಟ ಸುಖ, ಮೊದಮೊದಲು, ಧಗಧಗ, ಜುಳು ಜುಳು, ಹಚ್ಚಹಸಿರು, ಮನೆ ಮಠ, ಕಸ ಕಡ್ಡಿ

| ದ್ವಿರುಕ್ತಿ | ಅನುಕರಣಾವ್ಯಯ | ಜೋಡುನುಡಿ |
|---|---|---|
| | | |
| | | |
| | | |
| | | |
| | | |